ಶ್ರೀ ಎಂ. ವೀರಪ್ಪ ಮೊಯ್ಲಿ (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ).—

ಅ)	ಖಾನಾಪುರ	...	೧೫ ಬಾವಿಗಳು
	ಬೆಳಗಾಂ (ತಾ)	...	೩ ಬಾವಿಗಳು
	ಬಾಗೆವಾಡಿ, ಉಚ್ಚಗಾವ್	...	ಬಾವಿ ಕೊರೆದಿರುವುದಿಲ್ಲ
ಆ)	ಕಾರ್ಯನಿರ್ವಹಿಸುತ್ತಿರುವ ಬಾವಿಗಳು	...	೧೧
	ಕಾರ್ಯನಿರ್ವಹಿಸುತ್ತಿಲ್ಲದ ಬಾವಿಗಳು	...	೧
	ವಿದ್ಯುದೀಕರಣ ಆಗಬೇಕಾಗಿರುವ ಬಾವಿಗಳು	...	೬
ಇ)	೧. ಕೃಷಿ ಕೈಗಾರಿಕಾ ನಿಗಮ	...	೮
	೨. ಮಹಾಜನ ಬೋರ್‌ವೆಲ್ಸ್ ಕಂಪನಿ	...	೩
	೩. ರಿಗ್‌ವೆಲ್ ಇಂಜಿನೀಯರ್ಸ್	...	೨
	೪. ಜೇರನ್ ಬೋರ್‌ವೆಲ್ಸ್	...	೫
			೧೮

ಈ) ಈ ನಿರುಪಯುಕ್ತ ಕೊಳವೆ ಬಾವಿ ಬಾಬ್ತು ಯಾವುದೇ ಬ್ಯಾಂಕ್ ಸಾಲ ಮಂಜೂರಾಗಿರುವುದಿಲ್ಲ. ಈ ಕೊಳವೆ ಬಾವಿಯನ್ನು ವಿಫಲ ಎಂದು ಪರಿಗಣಿಸಲಾಗಿದೆ. ಇದರ ಯಾವುದೇ ವೆಚ್ಚ ಫಲಾನುಭವಿಯ ಮೇಲೆ ಹೊರಿಸಿರುವುದಿಲ್ಲ.

ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ವಿರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ತಿದ್ದುಪಡಿ) ಅಧ್ಯಾದೇಶ (೧೯೯೦ನೇ ಇಸವಿಯ ೩ನೇ ಸಂಖ್ಯೆಯ ಅಧ್ಯಾದೇಶ)ವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸದನದ ಮುಂದೆ ಮಂಡಿಸಲಾಯಿತು.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್.—ಮೇಲಿನ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆಯ ವರದಿಯನ್ನು ಸಭೆಯು ಒಪ್ಪಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಮೇಲಿನ ನಿರ್ಣಯವನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸಲಾಯಿತು.

ಕೊಂಕಣ ರೈಲ್ವೆ ಪ್ರಾಯೋಜಕತ್ವ ಮತ್ತು ರೈತರ ಸಾಲ ಮನ್ನಾ ಬಗ್ಗೆ

†ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೆ, ನಾನೂ, ಮಾನ್ಯ ಏಕಾಂತಯ್ಯನವರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಈಗಾಗಲೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ಸಂದರ್ಭದಲ್ಲಿ ಸಭಾನಾಯಕರಾದ ಮುಖ್ಯ ಮಂತ್ರಿಗಳೂ ಸದನದಲ್ಲಿ ಇರುವುದರಿಂದ ಇದನ್ನು ಚರ್ಚೆ ಮಾಡುವುದು ಒಳ್ಳೆಯದು. ಇದರ ಬಗ್ಗೆ ರಾಜ್ಯದ ಜನತೆಯೂ ಸಹಾ ಬಹಳ